# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪<br>Part – IV | ಬೆಂಗಳೂರು, ಸೋಮವಾರ, ೧೧ ಆಗಸ್ಟ್, ೨೦೨೫ (ಶ್ರಾವಣ ೨೦, ಶಕವರ್ಷ ೧೯೪೭)<br>BENGALURU, MONDAY, 11 AUGUST, 2025 (SHRAVANA 20, SHAKAVARSHA 1947) | ನಂ. ೪೪೫<br>No.445 |
|---|---|---|


**PERSONNEL AND ADMINISTRATIVE REFORMS SECRETARIAT**

**NOTIFICATION**

**No.DPAR 01 CHUVEBHA (ADDL.CEO-1)2024, Bengaluru, Dated: 11.08.2025**

The following Order No.76/KT-LA/07/2023/CEMS-II, dated, 25th July, 2025 of the Election Commission of India is republished hereunder for general information:

# ELECTION COMMISSION OF INDIA

**Nirvachan Sadan, Ashoka Road, New Delhi-110001**

**No: 76/KT-LA/07/2023/CEMS-II** Dated: 25th July, 2025 / 3 Sharavan, 1947(Saka)

## ORDER

**WHEREAS,** the General Election to Legislative Assembly, 2023 for **154-Rajarajeshwarinagara** Assembly Constituency of Karnataka was held in pursuance of the Election Commission of India Notification No.464/KT-LA/2023, dated 13th April, 2023; and

**WHEREAS,** as per Section 78 of the Representation of the People Act, 1951, every contesting candidate at an election shall, within 30 days from the date of election of the returned candidate, lodge with the District Election Officer an account of his/her election expenses which shall be a true copy of the account kept by him or his election agent under Section 77 of the said act; and

**WHEREAS,** the result of the election for **154-Rajarajeshwarinagara** Assembly Constituency of Karnataka, 2023 was declared by the Returning Officer on 13th May, 2023 and hence the last date for lodging the account of Election Expenses was 12th June, 2023; and

**WHEREAS**, as per the report dated:13.06.2023 and 28.11.2023 of the **DEO**, **Bengaluru Central** under sub-rule(1) of Rule 89 of the Conduct of Elections Rules, 1961 received through the CEO, Karnataka vide its letter no. DPAR 25 CHUVEBA

(Addl CEO-1) 2023; dated 27.06.2023 and further letter dated 12.02.2024 stating that **H.Rukmini,** a contesting candidate from **154-Rajarajeshwarinagara** Assembly Constituency in General Election to Legislative Assembly of Karnataka, 2023 has failed to lodge the account of her election expenses, as required under law; and

**WHEREAS,** on basis of the said report of the District Election Officer, **Bengaluru Central** a Show-Cause Notice No.76/KT-LA/07/2023/CEMS-II, dated 30.09.2024 was issued under sub rule (5) of Rule 89 of the Conduct of Elections Rules, 1961 by the Election Commission of India to **H.Rukmini,** for not lodging of the account of Election Expenses; and

**WHEREAS,** through the above said Show Cause Notice and under sub rule(6) of Rule 89 of the Conduct of Elections Rules, 1961, **H.Rukmini** was directed to submit representation in writing to the Commission explaining the reasons for not lodging the account and also to lodge the account of her election expenses with the District Election Officer, **Bengaluru Central** District within 20 days from the date of receipt of the notice; and

**WHEREAS,** the DEO, **Bengaluru Central** in its report no.AC/ELN/PR/715/2024-25; dated 17.01.2025 has reported that the said candidate was found 'not staying' at the address mentioned in the nomination paper and the ERO conducted a local enquiry with localities and a Mahazar Report was prepared. Thereafter, the said 'Show Cause Notice' was pasted on the door of the house at the given address on **08.11.2024** and further, a copy of 'Show Cause Notice' was served to e-mail of the candidate on **23.04.2025** as reported by the DEO Bengaluru Central vide their letter No.AC/ELN/PR/715/2025-26 dated 14.05.2025; and

**WHEREAS,** the District Election Officer, **Bengaluru Central** in its Supplementary Report no.AC/ELN/PR/715/2024-25; dated 17.01.2025 & no.AC/ELN/PR/715/2025-26; dated 14.05.2025 on account of candidate received through CEO, Karnataka letter No.DPAR/25/Chuvebha(Addl.CEO-1) 2023; dated 23.01.2025 & 16.05.2025 respectively has reported that **H.Rukmini** has not submitted any statement of account of election expenses. Further, after receipt of the said notice, **H.Rukmini** has neither furnished any proper reason nor explanation to the Election Commission of India for failure to lodge the account of her election expenses as prescribed under law; and

**WHEREAS,** Section 10A of the Representation of the People Act, 1951 provides that:-

*"If the Election Commission is satisfied that a person-*

*(a) has failed to lodge an account of election expenses within the time and in the manner required by or under this Act, and*

*(b) has no good reason or justification for the failure,*

*the Election Commission shall, by order published in the official Gazette, declare him to be disqualified and any such person shall be disqualified for a period of three years from the date of the order.";*

**WHEREAS,** on the basis of the facts and available records, the Commission is satisfied that **H.Rukmini** has failed to lodge the account of her election expenses and has no good reason or justification for the failure to do so; and

**NOW, THEREFORE,** in pursuance of Section 10A of the Representation of the People Act, 1951, the Election Commission of India hereby declares **H.Rukmini** resident of **195, 5TH Cross, Opp. Duggalamma Temple, Laggere, Halevooru, Peenya, Bengaluru – 560058** and a contesting candidate from **154-Rajarajeshwarinagara** Assembly Constituency of General Election to Legislative Assembly of Karnataka, 2023, to be disqualified for being chosen as and for being a member of either House of the Parliament or the Legislative Assembly or the Legislative Council of a State or Union Territory for a period of three years from the date of this order.

Sd/-

**(RAKESH KUMAR)**
**SECRETARY**

To.

**H.Rukmini,**
**195, 5TH Cross, Opp.**
**Duggalamma Temple, Laggere,**
**Halevooru, Peenya,**
**Bengaluru – 560058**

**(Madhu A.C)**
**Under Secretary to Government,**
**DPAR(Elections), Karnataka**

**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ**
**ಅಧಿಸೂಚನೆ**
**ಸಂ: ಸಿಆಸುಇ 01 ಚುವೆಭ(ಅಮುಚುಅ-1) 2024, ಬೆಂಗಳೂರು, ದಿನಾಂಕ: 11.08.2025**

ಭಾರತ ಚುನಾವಣಾ ಆಯೋಗದ ಈ ಕೆಳಕಂಡ ಆದೇಶ ಸಂ: 76/ಕೆಟಿ-ಎಲ್ಎ/07/2023/ಸಿಇಎಂಎಸ್-II, ದಿನಾಂಕ:25.07.2025 ಅನ್ನು ಸಾಮಾನ್ಯ ಮಾಹಿತಿಗಾಗಿ ಪುನರ್ ಪ್ರಕಟಿಸಿದೆ.

# ಭಾರತ ಚುನಾವಣಾ ಆಯೋಗ

**ನಿರ್ವಾಚನ ಸದನ, ಅಶೋಕ ರಸ್ತೆ, ನವದೆಹಲಿ-110001**

**ಸಂಖ್ಯೆ: 76/ಕೆಟಿ-ಎಲ್ಎ/07/2023/ಸಿಇಎಂಎಸ್-II** **ದಿನಾಂಕ:** **25ನೇ ಜುಲೈ, 2025**
**ಶ್ರಾವಣ ಮಾಸದ 03ನೇ ದಿನ, 1947(ಶಕ)**

## ಆದೇಶ

ಭಾರತ ಚುನಾವಣಾ ಆಯೋಗದ ಅಧಿಸೂಚನೆ ಸಂಖ್ಯೆ:464/ಕೆಟಿ-ಎಲ್ಎ/2023, ದಿನಾಂಕ:13ನೇ ಏಪ್ರಿಲ್, 2023ರ ಅನುಸಾರವಾಗಿ 2023ರ ಕರ್ನಾಟಕ ವಿಧಾನಸಭೆಯ **154-ರಾಜರಾಜೇಶ್ವರಿನಗರ ವಿಧಾನಸಭಾ ಮತಕ್ಷೇತ್ರಕ್ಕೆ** ಸಾರ್ವತ್ರಿಕ ಚುನಾವಣೆ ನಡೆಸಿರುವುದರಿಂದ; ಮತ್ತು

ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 78ನೇ ಪ್ರಕರಣದ ಅನುಸಾರ, ಚುನಾವಣೆಗೆ ಸ್ಪರ್ಧಿಸಿದ ಪ್ರತಿಯೊಬ್ಬ ಅಭ್ಯರ್ಥಿಯು, ಚುನಾವಣೆಯಲ್ಲಿ ಜಯಿಸಿದ ಅಭ್ಯರ್ಥಿಯನ್ನು ಘೋಷಿಸಿದ ದಿನಾಂಕದಿಂದ 30 ದಿನಗಳ ಒಳಗಾಗಿ ಸದರಿ ಅಧಿನಿಯಮದ 77ನೇ ಪ್ರಕರಣದ ಅಡಿಯಲ್ಲಿ, ಆತ ಅಥವಾ ಆತನ ಚುನಾವಣಾ ಏಜೆಂಟರು ಇಟ್ಟುಕೊಂಡಿರುವ ಲೆಕ್ಕಪತ್ರಗಳ ನೈಜ ಪ್ರತಿ ಆಗಿರತಕ್ಕ ಆತನ / ಆಕೆಯ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಜಿಲ್ಲಾ ಚುನಾವಣಾಧಿಕಾರಿಯವರಿಗೆ ಸಲ್ಲಿಸಬೇಕಾಗಿರುವುದರಿಂದ; ಮತ್ತು

ರಿಟರ್ನಿಂಗ್ ಅಧಿಕಾರಿಯವರು ದಿನಾಂಕ:13ನೇ ಮೇ 2023 ರಂದು ಕರ್ನಾಟಕದ 2023ರ **154-ರಾಜರಾಜೇಶ್ವರಿನಗರ** ವಿಧಾನಸಭಾ ಮತಕ್ಷೇತ್ರಕ್ಕೆ ಚುನಾವಣಾ ಫಲಿತಾಂಶವನ್ನು ಘೋಷಿಸಿರುವುದರಿಂದ ಮತ್ತು ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸಲು ಕಡೆಯ ದಿನಾಂಕ:12ನೇ ಜೂನ್ 2023 ಆಗಿರುವುದರಿಂದ; ಮತ್ತು

ಮುಖ್ಯ ಚುನಾವಣಾಧಿಕಾರಿ (ಸಿಇಓ), ಕರ್ನಾಟಕ ಇವರ ತಮ್ಮ ಪತ್ರ ಸಂಖ್ಯೆ: ಡಿಪಿಎಆರ್ 25 ಚುವೆಭ(ಅಪರ ಸಿಇಓ-1)2023, ದಿನಾಂಕ:27.06.2023ರ ಮತ್ತು ಇನ್ನೊಂದು ಪತ್ರ ದಿನಾಂಕ:12.02.2024ರ ಮುಖಾಂತರ ಸ್ವೀಕರಿಸಿದ ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ 89ನೇ ನಿಯಮದ (1)ನೇ ಉಪ-ನಿಯಮದ ಮೇರೆಗಿನ **ಜಿಲ್ಲಾ ಚುನಾವಣಾಧಿಕಾರಿ (ಡಿಇಓ), ಬೆಂಗಳೂರು ಕೇಂದ್ರ** ಇವರ ದಿನಾಂಕ:13.06.2023 ಮತ್ತು 28.11.2023ರ ವರದಿಗಳ ಪ್ರಕಾರ ಕರ್ನಾಟಕದ ವಿಧಾನಸಭಾ ಸಾರ್ವತ್ರಿಕ -ಚುನಾವಣೆ 2023ರಲ್ಲಿ **154-ರಾಜರಾಜೇಶ್ವರಿನಗರ** ವಿಧಾನಸಭಾ ಮತಕ್ಷೇತ್ರದಿಂದ ಸ್ಪರ್ಧಿಸಿದ ಅಭ್ಯರ್ಥಿಯಾದ **ಶ್ರೀಮತಿ ಹೆಚ್.ರುಕ್ಮಿಣಿ** ಇವರು ಕಾನೂನಿನ ಅಡಿಯಲ್ಲಿ ಅಗತ್ಯಪಡಿಸಿದಂತೆ, ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸಲು ವಿಫಲರಾಗಿರುವುದರಿಂದ; ಮತ್ತು

ಜಿಲ್ಲಾ ಚುನಾವಣಾಧಿಕಾರಿ, **ಬೆಂಗಳೂರು ಕೇಂದ್ರ** ಇವರ ಸದರಿ ವರದಿಯ ಆಧಾರದ ಮೇಲೆ, ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸದಿರುವುದಕ್ಕಾಗಿ **ಶ್ರೀಮತಿ ಹೆಚ್. ರುಕ್ಮಿಣಿ**ರವರಿಗೆ ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ ನಿಯಮ 89ರ ಉಪ-ನಿಯಮ(5)ರ ಅಡಿಯಲ್ಲಿ ಭಾರತ ಚುನಾವಣಾ ಆಯೋಗವು ಕಾರಣ ಕೇಳಿ ನೋಟೀಸು ಸಂಖ್ಯೆ: 76/ಕೆಟಿ-ಎಲ್ಎ/07/2023/ಸಿಇಎಂಎಸ್-II, ದಿನಾಂಕ:30.09.2024ರ ನೋಟೀಸನ್ನು ನೀಡಲಾಗಿರುವುದರಿಂದ; ಮತ್ತು

ಮೇಲೆ ಹೇಳಿದ "ಕಾರಣ ಕೇಳುವ ನೋಟೀಸಿನ" ಮೂಲಕ ಮತ್ತು ಚುನಾವಣೆಗಳನ್ನು ನಡೆಸುವ ನಿಯಮಗಳು, 1961ರ ನಿಯಮ 89ರ ಉಪ-ನಿಯಮ(6)ರ ಅಡಿಯಲ್ಲಿ, ನೋಟಿಸು ಸ್ವೀಕರಿಸಿದ ದಿನಾಂಕದಿಂದ 20 ದಿನಗಳ ಒಳಗಾಗಿ ತಮ್ಮ ಲೆಕ್ಕಪತ್ರಗಳನ್ನು ಸಲ್ಲಿಸದಿರುವುದಕ್ಕೆ ಕಾರಣವನ್ನು ವಿವರಿಸಿ ಆಯೋಗಕ್ಕೆ ಲಿಖಿತದಲ್ಲಿ ಮನವಿ ಸಲ್ಲಿಸುವಂತೆ ಹಾಗೂ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು **ಬೆಂಗಳೂರು ಕೇಂದ್ರ** ಜಿಲ್ಲೆಯ ಜಿಲ್ಲಾ ಚುನಾವಣಾಧಿಕಾರಿಯವರಿಗೆ ಸಲ್ಲಿಸುವಂತೆಯೂ ಸಹ **ಶ್ರೀಮತಿ ಹೆಚ್. ರುಕ್ಮಿಣಿ** ರವರಿಗೆ ನಿರ್ದೇಶಿಸಿರುವುದರಿಂದ; ಮತ್ತು

ಜಿಲ್ಲಾ ಚುನಾವಣಾಧಿಕಾರಿ (ಡಿಇಒ), **ಬೆಂಗಳೂರು ಕೇಂದ್ರ** ಇವರು, ತಮ್ಮ ಪತ್ರ ಸಂಖ್ಯೆ: ಎಸಿ/ಇಎಲ್ ಎನ್/ಪಿಆರ್/715/2024-25; ದಿನಾಂಕ:17.01.2025 ರ ವರದಿಯಲ್ಲಿ ಸದರಿ ಅಭ್ಯರ್ಥಿಯು ನಾಮ ಪತ್ರದಲ್ಲಿ ನೀಡಿದ ವಿಳಾಸದಲ್ಲಿ 'ವಾಸಿಸುತ್ತಿಲ್ಲ'ವೆಂದು ಕಂಡುಬಂದಿದೆ ಮತ್ತು ಮತದಾರರ ನೋಂದಣಾಧಿಕಾರಿಯವರು ಸ್ಥಳೀಯರೊಂದಿಗೆ ಒಂದು ಸ್ಥಳೀಯ ವಿಚಾರಣೆಯನ್ನು ನಡೆಸಿ, ಒಂದು ಮಹಜರು ವರದಿಯನ್ನು ಸಿದ್ದಪಡಿಸಿ, ತರುವಾಯ ಸದರಿ "ಕಾರಣ ಕೇಳಿ ನೋಟೀಸ್ " ಅನ್ನು ದಿನಾಂಕ:08.11.2024ರಂದು ನೀಡಲಾದ ವಿಳಾಸದ ಮನೆಯ ಬಾಗಿಲಿನ ಮೇಲೆ ಅಂಟಿಸಲಾಗಿತ್ತು ಹಾಗೂ ಮುಂದುವರೆದು, ಜಿಲ್ಲಾ ಚುನಾವಣಾಧಿಕಾರಿ, ಬೆಂಗಳೂರು ಕೇಂದ್ರ ಇವರ ಪತ್ರ ಸಂಖ್ಯೆ: ಎಸಿ/ಇಎಲ್ ಎನ್/ಪಿಆರ್/715/2025-26, ದಿನಾಂಕ:14.05.2025ರ ಮೂಲಕ ವರದಿ ಮಾಡಲಾದಂತೆ ದಿನಾಂಕ:23.04.2025ರಂದು ಅಭ್ಯರ್ಥಿಯ ಇ-ಮೇಲ್ ವಿಳಾಸಕ್ಕೆ 'ಕಾರಣ ಕೇಳಿ ನೋಟೀಸ್' ನ ಒಂದು ಪ್ರತಿಯನ್ನು ಕಳುಹಿಸಲಾಗಿದೆ ಎಂದು ವರದಿ ಮಾಡಿರುವುದರಿಂದ; ಮತ್ತು

ಮುಖ್ಯ ಚುನಾವಣಾಧಿಕಾರಿ (ಸಿಇಒ), ಕರ್ನಾಟಕ, ಇವರ ಪತ್ರ ಸಂಖ್ಯೆ:ಡಿಪಿಎಆರ್/25/ಚುವೆಭ (ಅಪರ ಸಿಇಒ-1)2023; ದಿನಾಂಕ:23.01.2025 ಮತ್ತು 16.05.2025ರ ಮುಖಾಂತರ ಸ್ವೀಕರಿಸಿದ ಅಭ್ಯರ್ಥಿಯ ಲೆಕ್ಕಪತ್ರದ ಕುರಿತಾಗಿ ಜಿಲ್ಲಾ ಚುನಾವಣಾಧಿಕಾರಿ, **ಬೆಂಗಳೂರು ಕೇಂದ್ರ** ಇವರು ತಮ್ಮಪೂರಕ ವರದಿ ಸಂಖ್ಯೆ:ಎಸಿ/ಇಎಲ್ ಎನ್/ಪಿಆರ್/715/2024-25; ದಿನಾಂಕ:17-01-2025 ಮತ್ತು ಸಂಖ್ಯೆ: ಎಸಿ/ಇಎಲ್ ಎನ್/ಪಿಆರ್/715/2025-26, ದಿನಾಂಕ:14.05.2025 ರಲ್ಲಿ **ಶ್ರೀಮತಿ ಹೆಚ್.ರುಕ್ಮಿಣಿ** ರವರು ಚುನಾವಣಾ ವೆಚ್ಚಗಳ ಲೆಕ್ಕ ಪತ್ರದ ಯಾವುದೇ ನಿರೂಪಣೆ ಅಥವಾ ವಿವರಪಟ್ಟಿಯನ್ನು ಸಲ್ಲಿಸಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ. ಅಲ್ಲದೇ, ಸದರಿ ನೋಟೀಸನ್ನು ಸ್ವೀಕರಿಸಿದ ತರುವಾಯ, **ಶ್ರೀಮತಿ ಹೆಚ್.ರುಕ್ಮಿಣಿ** ರವರು ಕಾನೂನಿನಡಿಯಲ್ಲಿ ನಿಯಮಿಸಲಾದಂತೆ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸಲು ವಿಫಲರಾಗಿದ್ದಕ್ಕಾಗಿ ಭಾರತ ಚುನಾವಣಾ ಆಯೋಗಕ್ಕೆ ಯಾವುದೇ ಸೂಕ್ತ ಕಾರಣವನ್ನಾಗಲಿ ಅಥವಾ ವಿವರಣೆಯನ್ನಾಗಲಿ ನೀಡಿರುವುದಿಲ್ಲವಾದ್ದರಿಂದ; ಮತ್ತು

ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 10ಎ ಪ್ರಕರಣದಲ್ಲಿ ಈ ಕೆಳಕಂಡಂತೆ ಉಪಬಂಧಿಸಲಾಗಿರುವುದರಿಂದ, ಎಂದರೆ :-

*"ಒಬ್ಬ ವ್ಯಕ್ತಿಯು,*

*(ಎ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಗತ್ಯಪಡಿಸಿದ ಕಾಲದೊಳಗೆ ಮತ್ತು ಅಗತ್ಯಪಡಿಸಿದ ರೀತಿಯಲ್ಲಿ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸಲು ವಿಫಲನಾಗಿದ್ದಾನೆಂದು; ಮತ್ತು*

*(ಬಿ) ಹಾಗೆ ವಿಫಲನಾಗಿರುವುದಕ್ಕೆ ಯಾವುದೇ ಸರಿಯಾದ ಕಾರಣ ಅಥವಾ ಸಮರ್ಥನೆಯನ್ನು ಅವನು ಹೊಂದಿದಿಲ್ಲವೆಂದು,*

– *ಚುನಾವಣಾ ಆಯೋಗಕ್ಕೆ ಮನದಟ್ಟಾದರೆ, ಚುನಾವಣಾ ಆಯೋಗವು ರಾಜ್ಯಪತ್ರದಲ್ಲಿ ಪ್ರಕಟವಾದ ಆದೇಶದ ಮೂಲಕ ಅವನು ಅನರ್ಹನಾಗಿದ್ದಾನೆಂದು ಘೋಷಿಸತಕ್ಕದ್ದು ಮತ್ತು ಅಂಥ ಯಾರೇ ವ್ಯಕ್ತಿಯನ್ನು ಆ*

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



*ಆದೇಶದ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಅನರ್ಹಗೊಳಿಸತಕ್ಕದ್ದು." ಎಂದು ಉಪಬಂಧಿಸಿರುವುದರಿಂದ;*

ವಾಸ್ತವ ಸಂಗತಿಗಳು ಮತ್ತು ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ, **ಶ್ರೀಮತಿ ಹೆಚ್.ರುಕ್ಮಿಣಿ** ರವರು ತಮ್ಮ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಸಲ್ಲಿಸಲು ವಿಫಲರಾಗಿದ್ದಾರೆಂದು ಮತ್ತು ಹಾಗೆ ಸಲ್ಲಿಸಲು ವಿಫಲರಾಗಿದ್ದಕ್ಕೆ ಯಾವುದೇ ಸೂಕ್ತ ಕಾರಣವನ್ನು ಅಥವಾ ಸಮರ್ಥನೆಯನ್ನು ನೀಡಿಲ್ಲವೆಂದು ಆಯೋಗಕ್ಕೆ ಮನವರಿಕೆಯಾಗಿರುವುದರಿಂದ; ಮತ್ತು

**ಈಗ**, ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 10ಎ ಪ್ರಕರಣದ ಅನುಸಾರವಾಗಿ, ಭಾರತದ ಚುನಾವಣಾ ಆಯೋಗವು **195, 5ನೇ ಅಡ್ಡ ರಸ್ತೆ, ದುಗ್ಗಲಮ್ಮ ದೇವಸ್ಥಾನದ ಎದುರು, ಲಗ್ಗೆರೆ, ಹಳೇವೂರು, ಪೀಣ್ಯ, ಬೆಂಗಳೂರು – 560058 ರ** ನಿವಾಸಿಯಾಗಿರುವ ಮತ್ತು 2023ರಲ್ಲಿ ಕರ್ನಾಟಕದ **154-ರಾಜರಾಜೇಶ್ವರಿನಗರ ವಿಧಾನ ಸಭೆಯ ಮತಕ್ಷೇತ್ರಕ್ಕೆ** ನಡೆದ ಸಾರ್ವತ್ರಿಕ **-** ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಯಾಗಿರುವ **ಶ್ರೀಮತಿ ಹೆಚ್.ರುಕ್ಮಿಣಿ** ಇವರನ್ನು ಈ ಆದೇಶದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಸಂಸತ್ತಿನ ಉಭಯ ಸದನಗಳ ಅಥವಾ ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ವಿಧಾನಸಭೆ ಅಥವಾ ವಿಧಾನ ಪರಿಷತ್ ಸದಸ್ಯರಾಗಿ ಚುನಾಯಿತಗೊಳ್ಳುವುದಕ್ಕೆ ಮತ್ತು ಸದಸ್ಯರಾಗುವುದಕ್ಕೆ ಅನರ್ಹರೆಂದು ಈ ಮೂಲಕ ಘೋಷಿಸಿದೆ.

ಸಹಿ/-

**(ರಾಕೇಶ್ ಕುಮಾರ್)**
**ಕಾರ್ಯದರ್ಶಿ**

ಇವರಿಗೆ,
**ಶ್ರೀಮತಿ ಹೆಚ್.ರುಕ್ಮಿಣಿ,**
**195, 5ನೇ ಅಡ್ಡ ರಸ್ತೆ, ದುಗ್ಗಲಮ್ಮ ದೇವಸ್ಥಾನದ ಎದುರು,**
**ಲಗ್ಗೆರೆ, ಹಳೇವೂರು, ಪೀಣ್ಯ,**
**ಬೆಂಗಳೂರು – 560058**

(**ಮಧು ಎ.ಸಿ**)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸು ಇಲಾಖೆ(ಚುನಾವಣೆಗಳು),ಕರ್ನಾಟಕ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH